**ಸಾಕ್ಷಿ ಯನ್ನು ದಿನಾಂಕ: 06-09-2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು :- 2 ನೇ ಪ್ರತಿವಾದಿ ಪರ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಪ್ರಕಾರ ನಾನು ಬೆಂಗಳೂರಿನ ಗಾಂಧಿನಗರದಲ್ಲಿ ವಾಸಿಸುತ್ತಿದ್ದೇನೆ ಎಂದರೆ ಸರಿ. 1 ನೇ ಪ್ರತಿವಾದಿ ಮತ್ತು ಅವರ ಸ್ನೇಹಿತರು ದಾವಾ ಸ್ವತ್ತನ್ನು ಮಾರಾಟ ಮಾಡಲು ನನ್ನನ್ನು ನೇರವಾಗಿ ನಮ್ಮ ಕಛೇರಿಗೆ ಬಂದು ಸಂಪರ್ಕಿಸಿರುತ್ತಾರೆ. ನನ್ನ ಕಛೇರಿ ಬೆಂಗಳೂರಿನ ಗಾಂಧಿ ನಗರದಲ್ಲಿ ಇರುತ್ತದೆ. ಅಶ್ವಥನಾರಾಯಣ ಎಂಬ ವ್ಯಕ್ತಿಯ ಮೂಲಕ ಅವರು ನನ್ನನ್ನು ಸಂಪರ್ಕಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಅಶ್ವಥನಾರಾಯಣ ರವರು ಸದರಿ ಕ್ರಯಪತ್ರಕ್ಕೆ ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ ಎಂದರೆ ಇರಬಹುದು. 1 ನೇ ಪ್ರತಿವಾದಿ ನನ್ನನ್ನು ನೇರವಾಗಿ ಸಂಪರ್ಕಿಸಿರುವುದಿಲ್ಲ ಅವರು ಅಶ್ವಥನಾರಾಯಣ ರವರನ್ನು ಸಂಪರ್ಕಿಸಿರುತ್ತಾರೆ ಎಂದರೆ ಸರಿಯಲ್ಲ. ವಾದಿಗಳು ನನ್ನ ಮತ್ತು ಅಶ್ವಥನಾರಾಯಣ ವಿರುದ್ಧ ಖಾಸಗಿ ದೂರು ನಂ.23/2005 ನ್ನು ದಾಖಲಿಸಿರುತ್ತಾರೆ ಎಂದರೆ ನಾನು ಸದರಿ ಪ್ರಕರಣದಲ್ಲಿ ಕೇವಲ ಸಾಕ್ಷಿಯಾಗಿರುತ್ತೇನೆ. ನಾನು ಮತ್ತು ಅಶ್ವಥನಾರಾಯಣ ನಮ್ಮ ಪ್ರಭಾವವನ್ನು ಬಳಸಿ ನಮ್ಮನ್ನು ಸಾಕ್ಷ್ಯದಾರರನ್ನಾಗಿ ಮಾಡಿಸಿರುತ್ತೇವೆ ಎಂದರೆ ಸರಿಯಲ್ಲ. ನನಗೆ 1 ನೇ ಪ್ರತಿವಾದಿ ಪರಿಚಯ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಇರುವುದಿಲ್ಲ ಹಾಗೂ ಅವರು ಕೇವಲ ಅಶ್ವಥನಾರಾಯಣ ರವರನ್ನು ಸಂಪರ್ಕಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು 1 ನೇ ಪ್ರತಿವಾದಿಯ ಲಿಖಿತ ಹೇಳಿಕೆಯನ್ನು ಓದಿ ತಿಳಿದುಕೊಂಡಿರುವುದಿಲ್ಲ. 1 ನೇ ಪ್ರತಿವಾದಿಯವರ ಲಿಖಿತ ಹೇಳಿಕೆಯಲ್ಲಿ ಅವರು ಅಶ್ವಥನಾರಾಯಣರವರನ್ನು ಅಡಮಾನ ಮಾಡಲು ಸಂಪರ್ಕಿಸಿದಾಗ ಅವರು ಮೋಸದಿಂದ ನನ್ನ ಜೊತೆ ಶಾಮೀಲಾಗಿ ಕ್ರಯಪತ್ರ ಮಾಡಿಸಿಕೊಂಡಿರುತ್ತಾರೆ ಎಂದು ಹೇಳಿರುತ್ತಾರೆ ಎಂದರೆ ಅದು ತಪ್ಪು. ನನಗೆ ಕನ್ನಡ ಭಾಷೆ ಬರುವುದಿಲ್ಲ ಕೇವಲ ಇಂಗ್ಲೀಷ ಭಾಷೆ ಮಾತ್ರ ಬರುತ್ತದೆ ಎಂದರೆ ನನಗೆ ಕನ್ನಡ ಗೊತ್ತು, ಆದರೆ ಇಂಗ್ಲೀಷ ಭಾಷೆ ಮೇಲೆ ಹತೋಟಿ ಇದೆ ಎಂದು ಹೇಳುತ್ತೇನೆ. ನನ್ನ ಕ್ರಯಪತ್ರವನ್ನು ನನ್ನ ಸೂಚನೆ ಮೇರೆಗೆ ನಮ್ಮ ವಕೀಲರು ತಯಾರಿಸಿರುತ್ತಾರೆ. 1 ನೇ ಪ್ರತಿವಾದಿ ಅನಕ್ಷರಸ್ಥನಾಗಿದ್ದು, ಅವರಿಗೆ ಇಂಗ್ಲೀಷ ಭಾಷೆ ಬರುವುದಿಲ್ಲ ಎಂದರೆ ಸರಿಯಲ್ಲ. ಕ್ರಯಪತ್ರ ನೋಂದಣಿ ಮಾಡುವಾಗ ಉಪನೋಂದಣಾಧಿಕಾರಿಗಳು ಕ್ರಯಪತ್ರದ ವಿಷಯವನ್ನು ಓದಿ ಹೇಳಿ ಸಹಿ ಪಡೆದಿರುತ್ತಾರೆ. ಹಳೆಯ ದೇವನಹಳ್ಳಿ ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ಜನ ಸಂದಣಿ ಇರುವುದರಿಂದ ದಾಖಲೆಗಳನ್ನು ಓದಿ ಹೇಳಿ ಸಹಿ ಪಡೆಯುವ ಸಾಧ್ಯತೆ ಇರಲಿಲ್ಲ ಎಂದೆ ಸರಿಯಲ್ಲ. ನಾನು ಮತ್ತು

ಅಶ್ವಥನಾರಾಯಣ ರವರು ಸೇರಿ 1 ನೇ ಪ್ರತಿವಾದಿಯ ಅನಕ್ಷರತೆಯ ದುರುಪಯೋಗ ಪಡೆದುಕೊಂಡು ಅವರಿಗೆ ಮೋಸ ಮಾಡಿ ಕ್ರಯಪತ್ರವನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ದಾಖಲೆಯಲ್ಲಿರುವ ಭಾವ ಚಿತ್ರವನ್ನು ತೋರಿಸಲಾಗಿ ಸಾಕ್ಷಿಯು ತಾನು ಕನ್ನಡಕವನ್ನು ತರದೇ ಇರುವುದರಿಂದ ಗುರುತಿಸಲು ಸಾಧ್ಯವಿಲ್ಲ ಎಂದು ನುಡಿಯುತ್ತಾರೆ. ಆ ಕಾರಣದಿಂದ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶವನ್ನು ನೀಡಿ ಸಾಕ್ಷಿದಾರರಿಗೆ ಮುಂದಿನ ದಿನಾಂಕದಂದು ಕನ್ನಡಕ ಧರಿಸಿ ಬರುವಂದತೆ ಸೂಚಿಸಲಾಯಿತು.

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**